ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮಗಳು

187(613); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2014–15ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು ಯಾವುವು; ಅವು ಯಾವ ಹಂತದಲ್ಲಿವೆ. (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) 2014–15ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ತೆಗೆದುಕೊಳ್ಳಲು ಉದ್ದೇಶಿಸಿರುವ ತಾಲ್ಲೂಕುವಾರು ಕಾರ್ಯಕ್ರಮಗಳ ವಿವರ ಕೆಳಗಿನಂತಿದೆ.

1. ಹಾವೇರಿ ತಾ॥ ದೇವಗಿರಿ ಗ್ರಾಮದಿಂದ ಕವಿ ಪುಟ್ಟರಾಜ ಗವಾಯಿಗಳ ಸ್ಮಾರಕಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 60.00 ಲಕ್ಷಗಳ ಅಂದಾಜಿನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾವೇರಿ ರವರ ಮೂಲಕ ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. RIDF-XIX-R-19417

2. ಹಾನಗಲ್ ತಾ॥ ಕಾಡಶೆಟ್ಟಿಹಳ್ಳಿ ಗ್ರಾಮದಲ್ಲಿ ಶ್ರೀ ಪಂಚಾಕ್ಷರಿ ಗವಾಯಿಗಳರವರ ಜನ್ಮ ಸ್ಥಳಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 60.00 ಲಕ್ಷಗಳ ಅಂದಾಜಿನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾವೇರಿ ರವರ ಮೂಲಕ ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. RIDF-XIX-R-19418

3. ಹಾನಗಲ್ ತಾಲ್ಲೂಕಿನ ಕಲಕೇರಿ ಗ್ರಾಮದ ಪುರಾತನ ಇತಿಹಾಸವುಳ್ಳ ಗ್ರಾಮದಲ್ಲಿ ರೂ. 50.00 ಲಕ್ಷಗಳ ಅಂದಾಜಿನಲ್ಲಿ ಯಾತ್ರಿನಿವಾಸ ನಿರ್ಮಾಣ. ಸದರಿ ಯೋಜನೆಗೆ ಅನುಷ್ಠಾನ ಸಂಸ್ಥೆಯಿಂದ ಅಂದಾಜುಪಟ್ಟಿ ಬರಬೇಕಿದೆ.

4. ಶಿಗ್ಗಾಂವ ತಾ॥ ಶಿಶುನಾಳ ಗ್ರಾಮದಲ್ಲಿ ಸಂತ ಶಿಶುನಾಳ ಶರೀಫರ ಗದ್ದುಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 90.00 ಲಕ್ಷಗಳ ಅಂದಾಜಿನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾವೇರಿ ರವರ ಮೂಲಕ ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. RIDF-XIX-R-19424

5. ಶಿಗ್ಗಾಂವ್ ತಾಲ್ಲೂಕಿನ ಬಾಡ ಗ್ರಾಮದ ಶ್ರೀ ಕನಕದಾಸರ ಜನ್ಮ ಸ್ಥಳದ ಬಳಿ ರೂ. 50.00 ಲಕ್ಷಗಳ ಅಂದಾಜಿನಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾಗಿದೆ. ರೂ. 20.00 ಲಕ್ಷಗಳನ್ನು ಸದರಿ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಾರಂಭಿಸಬೇಕಿದೆ.

6. ಬ್ಯಾಡಗಿ ತಾಲ್ಲೂಕಿನ ಸುಕ್ಷೇತ್ರ ಗುಡ್ಡದ ಮಲ್ಲಾಪುರದ ಶ್ರೀ ಮೂಕಪ್ಪಸ್ವಾಮಿಗಳ ಸಂಸ್ಥಾನ ದಾಸೋಹ ಮಠದ ಬಳಿ ರೂ. 58.50 ಲಕ್ಷಗಳ ಅಂದಾಜಿನಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ನಿರ್ಮಿತಿಕೇಂದ್ರದ ಮೂಲಕ ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

7. ರಾಣೆಬೆನ್ನೂರು ತಾಲ್ಲೂಕಿನ ವೈಲ್ಡ್ ಲೈಫ್ ಸೆಂಚುರಿಯನ್ನು ರೂ. 100.00 ಲಕ್ಷಗಳ ಅಂದಾಜಿನಲ್ಲಿ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಕಾಮಗಾರಿ. ಸದರಿ ಯೋಜನೆಗೆ ಅನುಷ್ಠಾನ ಸಂಸ್ಥೆಯಿಂದ ಅಂದಾಜುಪಟ್ಟಿ ಬರಬೇಕಿದೆ.

8. ಹಿರೇಕೆರೂರು ತಾಲ್ಲೂಕಿನ ಸರ್ವಜ್ಞನ ಜನ್ಮಸ್ಥಳವಾದ ಅಬಲೂರು ಹಾಗೂ ಮದಗ ಮಾಸೂರು ಕೆರೆ ಪ್ರದೇಶವನ್ನು ರೂ. 100.00 ಲಕ್ಷಗಳ ಅಂದಾಜಿನಲ್ಲಿ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಕಾಮಗಾರಿ. ಸದರಿ ಯೋಜನೆಗೆ ಅನುಷ್ಠಾನ ಸಂಸ್ಥೆಯಿಂದ ಅಂದಾಜುಪಟ್ಟಿ ಬರಬೇಕಿದೆ.

ವಸತಿ ಯೋಜನೆ

188(614); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2014–15ನೇ ಸಾಲಿನಲ್ಲಿ ಈವರೆವಿಗೂ ಬಸವ ವಸತಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿವಾರು ಗುರಿ ನಿಗದಿ ಮಾಡದೇ ಇರುವುದಕ್ಕೆ ಕಾರಣವೇನು;

ಆ) ಪ್ರಸಕ್ತ ಸಾಲಿನಲ್ಲಿ ಗುರಿ ನಿಗದಿ ಮಾಡಲಾಗುವುದೇ;

ಇ) 2013–14ನೇ ಸಾಲಿನಲ್ಲಿ ತಾಲ್ಲೂಕುವಾರು ನಿಗದಿ ಮಾಡಿದ ಗುರಿ ಎಷ್ಟು;

ಈ) ಡಿಸೆಂಬರ್ 2014ರ ಅಂತ್ಯದವರೆಗೆ ತಾಲ್ಲೂಕುವಾರು ಸಾಧಿಸಿದ ಪ್ರಗತಿ ಎಷ್ಟು?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) 2014–15ನೇ ಸಾಲಿನಲ್ಲಿ 2013–14ನೇ ಶ್ರೇಣಿಯಡಿ ಹೆಚ್ಚುವರಿಯಾಗಿ 13700 ಮನೆಗಳ ಗುರಿಯನ್ನು ಅತೀ ಹೆಚ್ಚು ವಸತಿ ರಹಿತರಿರುವ 43 ವಿಧಾನಸಭಾ ಕ್ಷೇತ್ರಗಳಿಗೆ ನಿಗಧಿಪಡಿಸಲಾಗಿದೆ.

ಆ) 2014–15ನೇ ಆರ್ಥಿಕ ವರ್ಷದಲ್ಲಿ ಗುರಿ ನಿಗದಿಪಡಿಸಿರುವುದಿಲ್ಲ.

ಇ) ಬಸವ ವಸತಿ ಯೋಜನೆಯಡಿ 2013–14ನೇ ಸಾಲಿಗೆ ಪ್ರತಿ ಗ್ರಾಮ ಪಂಚಾಯತ್‌ಗೆ 20 ಮನೆಗಳಂತೆ ಒಟ್ಟು 112560 ಮನೆಗಳ ಗುರಿಯನ್ನು ನಿಗಧಿಪಡಿಸಲಾಗಿತ್ತು. ತದನಂತರ 2013–14ನೇ ಹೆಚ್ಚುವರಿ